# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-2410/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 15/05/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಬಿ. ಸದಾಶಿವ ಶೆಟ್ಟಿ, ಕಾರ್ಯದರ್ಶಿ, ಹೆರೂರು ನಾಗರೀಕ ಹೋರಾಟ ಸಮಿತಿ, ಬ್ರಹ್ಮಾವರ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಸದಾಶಿವ ಶೆಟ್ಟಿ ರವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಬ್ರಹ್ಮಾವರದ 27ನೇ ಚಾಂತಾರು ಗ್ರಾಮ ಪಂಚಾಯತಿ ವತಿಯಿಂದ 2011 ರಿಂದ 2016 ರವರೆಗೆ ಸಾವಿರಾರು ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿರುತ್ತದೆ. ಪ್ರತಿಯೊಬ್ಬ ಫಲಾನುಭವಿಯಿಂದ ರೂ.50/- ಅನ್ನು ವಸೂಲು ಮಾಡಲಾಗಿದೆ. ಇದುವರೆಗೆ 6000 ದಿಂದ 7000 ಪಡಿತರ ಚೀಟಿಗಳು ವಿತರಣೆಯಾಗಿದ್ದು, ಸುಮಾರು ರೂ.3.00 ರಿಂದ 4.00 ಲಕ್ಷ ಹಣವು ಸಂದಾಯವಾಗಿರುತ್ತದೆ. ಆದರೆ, ಈ ಹಣವನ್ನು ಯಾವುದೇ ಬ್ಯಾಂಕ್ ಖಾತೆಗೆ ಸರ್ಕಾರದ ಹೆಸರಿನಲ್ಲಿ ಜಮಾ ಮಾಡಿರುವುದಿಲ್ಲ. ಹಾಗೆಯೇ ಗ್ರಾಮ ಪಂಚಾಯತಿಯ ಯಾವುದೇ ಜಮಾ ಖರ್ಚು ಖಾತೆಯಲ್ಲಿ ದಾಖಲಾಗಿರುವುದಿಲ್ಲ. ಪಡಿತರ ಕಾರ್ಡಿನ ಕಂಪ್ಯೂಟರಿಕೃತ ದಾಖಲೆಗಳನ್ನು ಕೂಡ ನಾಶ ಮಾಡಲಾಗಿರುತ್ತದೆ. 2011 ರಿಂದ 2016 ರವರೆಗೆ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ನೀಡಲಾಗಿರುವ ಮಾಹಿತಿ ಪ್ರಕಾರ ಯಾವುದೇ ಉಳಿತಾಯ ಖಾತೆಗೆ ಜಮಾ ಮಾಡಿರುವುದಿಲ್ಲ. ನಾಗರೀಕ ಹೋರಾಟ ಸಮಿತಿಯವರು ದೂರು ನೀಡಿದ ನಂತರ ದಿ:16/06/2016 ರಂದು ರೇಷನ್ ಕಾರ್ಡ್ ನ ಉಳಿತಾಯ ಖಾತೆಯನ್ನು ಬ್ರಹ್ಮಾವರದ ವಿಜಯ ಬ್ಯಾಂಕ್‌ನಲ್ಲಿ ತೆರೆಯಲಾಗಿದೆ. ದಿ:16/06/2016 ರಿಂದ ದಿ:15/08/2016 ರವರೆಗೆ ವಿಜಯ ಬ್ಯಾಂಕ್ ಖಾತೆಯಲ್ಲಿ ರೂ.1,85,000/- ವನ್ನು ಜಮಾ ಮಾಡಲಾಗಿರುತ್ತದೆ. ಈ ಹಿಂದೆ ಹೇಳಿದಂತೆ ಸದರಿ ಲಕ್ಷಾಂತರ ಮೊತ್ತದ ಹಣವನ್ನು ಚಾಂತಾರು ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಕೆ. ಸುರೇಶ್ ಹಾಗೂ ರೇಷನ್ ಕಾರ್ಡ್ ಸಿಬ್ಬಂದಿಯಾಗಿರುವ ಶ್ರೀಮತಿ ಗೀತಾ ಇವರು ತಮ್ಮಿಬ್ಬರ ನಡುವೆ ಹಂಚಿಕೊಂಡಿರುವುದಾಗಿ ಕಂಡು ಬರುತ್ತದೆ. ಮಾಹಿತಿ ಹಕ್ಕು ಅಧಿನಿಯಮದಡಿ ನೀಡಿರುವ ಮಾಹಿತಿ ಪ್ರಕಾರ ರೂ.50,000/- ವನ್ನು ಸರ್ಕಾರಕ್ಕೆ ಕಟ್ಟಲಾಗಿದೆ ಎಂದು ಕಂಡು ಬರುತ್ತದೆ. ಆದರೆ, ತಾಲ್ಲೂಕು ಕಛೇರಿ ನೀಡಿರುವ ಮಾಹಿತಿ ಹಕ್ಕು ಆಧಾರದಲ್ಲಿ ಖಜಾನೆಗೆ ಕೇವಲ ರೂ.23,000/-

ಸಂದಾಯ ಮಾಡಿರುವುದು ಕಂಡು ಬರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು ಹಾಗೂ ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ಉಡುಪಿಯ ಆರಕ್ಷಕ ಅಧೀಕ್ಷಕರಿಗೆ ವಹಿಸಲಾಗಿರುತ್ತದೆ. ತನಿಖೆಯನ್ನು ಪೊಲೀಸ್ ಉಪಾಧೀಕ್ಷಕರು, ಕ.ಲೋ., ಉಡುಪಿ ಇವರಿಗೆ ವಹಿಸಿದ್ದು, ಸದರಿಯವರು ದಿ:17/01/2017 ರಂದು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನಂಶಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ಸಾರ್ವಜನಿಕರಿಂದ ಸ್ವೀಕರಿಸಿದ ಮೊತ್ತವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಪಾವಿತಿಸಿಕೊಳ್ಳಲಾಗಿರುತ್ತದೆ. ಉಳಿದ ಮೊತ್ತಕ್ಕೆ ಸರಿಯಾಗಿ ಸರ್ಕಾರದ ಮಾರ್ಗದರ್ಶನ ಇಲ್ಲದೆ ಇದ್ದಿದ್ದರಿಂದ ನಗದಾಗಿ ಇದ್ದುದನ್ನು ತಾಲ್ಲೂಕು ಪಂಚಾಯತಿಯ ಮಾಸಿಕ ಪರಿಶೀಲನಾ ಸಭೆಯಲ್ಲಿ ಪಂಚಾಯತಿ ಅಧ್ಯಕ್ಷರ ಸೂಚನೆ ಮೇರೆಗೆ ಹೊಸ ಬ್ಯಾಂಕ್ ಖಾತೆ ತೆರೆದು ಸರ್ಕಾರದಿಂದ ಮುಂದಿನ ಸೂಚನೆ ಬರುವವರೆಗೂ ಸದರಿ ಖಾತೆಯಲ್ಲಿ ಜಮಾ ಮಾಡಲಾಗಿರುತ್ತದೆ. ದೂರುದಾರರು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತದೆ. 2013-14ನೇ ಸಾಲಿನಲ್ಲಿ ವಸೂಲಾದ ಮೊತ್ತ ನವೀಕರಣಕ್ಕೆ ರೂ.50,250/- ಮತ್ತು ಹೊಸ ಪಡಿತರ ಚೀಟಿಗೆ ರೂ.30,750/- ಒಟ್ಟು ರೂ.81,000/- ಬಂದಿದ್ದು, 2014-15ನೇ ಸಾಲಿಗೆ ನವೀಕರಣಕ್ಕಾಗಿ ರೂ.54,350/- ಹಾಗೂ ಹೊಸ ಪಡಿತರ ಚೀಟಿಗೆ ರೂ.31,050 ಒಟ್ಟು ರೂ.85,400/- ವಸೂಲಿಯಾಗಿದ್ದು, ಈ ಮೊತ್ತವನ್ನು ತಾಲ್ಲೂಕು ಕಛೇರಿಯ ಲೆಕ್ಕ ಶೀರ್ಷಿಕೆ 040800101107 ಇದಕ್ಕೆ ಪಾವತಿ ಮಾಡಲಾಗಿರುತ್ತದೆ. 2015-16ನೇ ಸಾಲಿನಿಂದ ಇದುವರೆಗೂ ಸಂಗ್ರಹವಾದ ಒಟ್ಟು ಮೊತ್ತ ರೂ.1,80,164/- ಅನ್ನು ಈಗಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ವಿಜಯ ಬ್ಯಾಂಕ್ ಬ್ರಹ್ಮಾವರ ಶಾಖೆಗೆ ಎಸ್‌ಬಿ ಖಾತೆ ಸಂ:103701011003784 ಇದಕ್ಕೆ ಜಮಾ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. 2ನೇ ಎದುರುದಾರರು ಸಹ 1ನೇ ಎದುರುದಾರರು ನೀಡಿರುವ ಆಕ್ಷೇಪಣೆಯನ್ನು ಅನುಸರಿಸಿ ಉತ್ತರ ನೀಡಿರುತ್ತಾರೆ.

4. ದೂರಿಗೆ ಸಂಬಂಧಿಸಿದಂತೆ ತನಿಖಾಧಿಕಾರಿಯವರು ಉಪನಿರ್ದೇಶಕರು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಉಡುಪಿ ಜಿಲ್ಲೆ ಇವರಿಂದ ಹಾಗೂ ತಹಶೀಲ್ದಾರ್, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ಇವರಿಂದ ವರದಿಯನ್ನು ಪಡೆದಿರುತ್ತಾರೆ. ತಹಶೀಲ್ದಾರ್‌ರವರು ತಮ್ಮ ವರದಿಯಲ್ಲಿ ಆನ್‌ಲೈನ್ ದಾಖಲಾತಿಯಂತೆ ಚಾಂತಾರು ಪಂಚಾಯತಿ ಮೂಲಕ ಸ್ವೀಕೃತವಾದ ಪಡಿತರ

ಚೀಟಿಗಳ ವಿತರಣೆಯಲ್ಲಿ 35899 ಪಡಿತರ ಚೀಟಿಗಳಿಗೆ ರೂ.20/- ರಂತೆ ಹಣವನ್ನು ಸ್ವೀಕರಿಸಿದ್ದು, ರೂ.50/- ರಂತೆ ಹಣ ಸ್ವೀಕರಿಸಿದ ಬಗ್ಗೆ ತಮಗೆ ಮಾಹಿತಿ ಇರುವುದಿಲ್ಲವೆಂದು, ಸ್ವೀಕೃತವಾದ ಹಣದಲ್ಲಿ ಒಟ್ಟು ರೂ.20,920/- ಅನ್ನು ಸರ್ಕಾರದ ಖಾತೆಗೆ ಜಮಾ ಮಾಡಲಾಗಿರುತ್ತದೆ. ಬಾಕಿ ಇರಿಸಿದ ಅರ್ಜಿ ಶುಲ್ಕದ ಮೊತ್ತ ರೂ.1,79,450/- ಇರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ದೂರಿಗೆ ಸಂಬಂಧಿಸಿದಂತೆ ಚಾಂತಾರು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಿಂದ ದಾಖಲಾತಿ ಮತ್ತು ಮಾಹಿತಿ ನೀಡುವಂತೆ ಕೋರಲಾಗಿದ್ದು, 2011ನೇ ಸಾಲಿನಲ್ಲಿ ಆನ್‌ಲೈನ್ ರೇಷನ್ ಕಾರ್ಡ ಪ್ರಕ್ರಿಯೇ ಇರಲಿಲ್ಲವೆಂದು 2012 ರಿಂದ 2014-15ನೇ ಸಾಲಿನವರೆಗೆ 1497 ಜನರು ಹೊಸ ಪಡಿತರ ಚೀಟಿಗೆ ನೋಂದಾಯಿಸಿರುತ್ತಾರೆ. 2092 ಜನರು ಪಡಿತರ ಚೀಟಿ ನವೀಕರಣಕ್ಕೆ ನೋಂದಾಯಿಸಿರುತ್ತಾರೆ. ಪ್ರತಿ ಪಡಿತರ ಚೀಟಿ ಆನ್‌ಲೈನ್ ಪ್ರಕ್ರಿಯೆಗೆ ಕುಟುಂಬದಲ್ಲಿ 4 ಸದಸ್ಯರಿದ್ದಲ್ಲಿ ರೂ.25/-, 4 ಕ್ಕಿಂತ ಹೆಚ್ಚು ಸದಸ್ಯರಿದ್ದಲ್ಲಿ ಪ್ರತಿ ಸದಸ್ಯರಿಗೆ ರೂ.5/- ರಂತೆ ವಸೂಲಿ ಮಾಡಲಾಗುತ್ತಿದ್ದು, ಹಾಗೆ ಪಡಿತರ ಚೀಟಿ ವಿತರಣೆ ಬಗ್ಗೆ ರೂ.20/- ರಂತೆ ವಸೂಲಿ ಮಾಡಲಾಗುತ್ತಿದೆ. ಚಾಂತಾರು ಗ್ರಾಮ ಪಂಚಾಯತಿಯಲ್ಲಿ ಆನ್‌ಲೈನ್ ಪ್ರಕ್ರಿಯೇ ಪ್ರಾರಂಭವಾದ ದಿನದಿಂದ 16/06/2016 ರವರೆಗೆ ವಸೂಲಾತಿ ಮಾಡಿದ ಮೊತ್ತ ರೂ.1,80,460/- ಹಾಗೂ ಪಡಿತರ ಚೀಟಿ ವಿತರಣೆ ಬಗ್ಗೆ ರೂ.20,640/- ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

5. ನಂತರ ದೂರು ಅರ್ಜಿಗೆ ಸಂಬಂಧಿಸಿದಂತೆ ತನಿಖಾಧಿಕಾರಿಯವರು ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನ ವರ್ತುಲ, ಉಡುಪಿ ಇವರಿಗೆ 27ನೇ ಚಾಂತಾರು ಗ್ರಾಮ ಪಂಚಾಯತಿ ವ್ಯಾಪ್ತಿಯ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಮತ್ತು ದಾಖಲಾತಿಗಳನ್ನು ಒದಗಿಸುವಂತೆ ಕೋರಿದ್ದು, ಅವರು ದಿ:25/11/2016 ರಂದು ನೀಡಿದ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯಲ್ಲಿ 2010-11ನೇ ಸಾಲಿನಿಂದ 2014-15ನೇ ಸಾಲಿನವರೆಗೆ ಅಂದರೆ ದಿ:01/04/2010 ರಿಂದ 31/03/2015 ರವರೆಗೆ ನಡೆಸಿರುವ ಲೆಕ್ಕಪರಿಶೋಧನಾ ವರದಿಯನ್ನು ನೀಡಿದ್ದು, 2015-16ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಳ್ಳಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆಂದು ತನಿಖಾಧಿಕಾರಿಯವರು ವರದಿಯಲ್ಲಿ ತಿಳಿಸಿರುತ್ತಾರೆ. ಸದರಿ ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಿದಲ್ಲಿ ರೇಷನ್ ಕಾರ್ಡ್ ಸಿಬ್ಬಂದಿ ಶ್ರೀಮತಿ ಗೀತಾ ರವರಿಗೆ ಮಾಸಿಕ ರೂ.3,500/- ರಂತೆ ನಮೂದಿಸಿರುವುದು ಕಂಡು ಬಂದಿರುತ್ತದೆ. ಸದರಿ ಸಿಬ್ಬಂದಿಯವರನ್ನು ಜಿಲ್ಲಾ ಪಂಚಾಯತ್‌ನಿಂದ ನೇಮಕಾತಿ ಬಗ್ಗೆ ಮಂಜೂರಾತಿಯನ್ನು ಪಡೆದುಕೊಳ್ಳದೇ ಇರುವುದು ಕಂಡು ಬಂದಿರುತ್ತದೆ.

6. ಪಡಿತರ ಚೀಟಿ ವಿತರಣೆಗೆ ಸಂಬಂಧಿಸಿದಂತೆ ಚಾಂತಾರು ಗ್ರಾಮ ಪಂಚಾಯತಿಯಿಂದ ದಿ:01/07/2012 ರಿಂದ ಆನ್ ಲೈನ್ ಪ್ರಕ್ರಿಯೇ ಪ್ರಾರಂಭವಾಗಿದ್ದು, ಇದುವರೆಗೆ ರೂ.181498/- ಗ್ರಾಮ ಪಂಚಾಯತ್‌ನ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿರುತ್ತದೆ. ಆದರೆ, 2012-13ನೇ ಸಾಲಿನಲ್ಲಿ 218 ಪಡಿತರ ಚೀಟಿ ಅರ್ಜಿಗಳ ವಿಲೇವಾರಿ ಬಗ್ಗೆ ದಾಖಲೆ ಇದ್ದು, ಸದರಿ ಪಡಿತರ ಚೀಟಿಗಳಿಗೆ ಸಂಬಂಧಿಸಿದ

ಹಣವನ್ನು ಸರ್ಕಾರದ ಖಾತೆಗೆ ಜಮಾ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳಿರುವುದಿಲ್ಲ. ಈ ದೂರು ಅರ್ಜಿಗೆ ಸಂಬಂಧಿಸಿದಂತೆ ಕೈಗೊಳ್ಳಲಾದ ಕ್ರಮದ ಬಗ್ಗೆ ದಾಖಲಾತಿ ಒದಗಿಸುವಂತೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರಿಗೆ ಕೋರಲಾಗಿದ್ದು, ಅವರು ಕೊಟ್ಟ ವರದಿಯಲ್ಲಿ ಪಂಚಾಯತಿ ಅಭಿವೃದ್ದಿ ಅಧಿಕಾರಿ ಇವರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿರುವುದು ಕಂಡು ಬರುತ್ತದೆ.

7. 2013-14, 2014-15, 2015-16 ಮತ್ತು 2016-17 ನೇ ಸಾಲಿನಲ್ಲಿ ರೂ.1,81,498/- ಅನ್ನು ಗ್ರಾಮ ಪಂಚಾಯತಿ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಲಾಗಿರುತ್ತದೆ. ಆದರೆ, 2012-13ನೇ ಸಾಲಿನ 218 ಪಡಿತರ ಚೀಟಿಗಳ ಅರ್ಜಿ ವಿಲೇವಾರಿಗೆ ಸಂಬಂಧಿಸಿದಂತೆ ಸರ್ಕಾರದ ಲೆಕ್ಕಶೀರ್ಷಿಕೆಗೆ ಹಣ ಜಮಾ ಮಾಡದೇ ಇರುವುದು ಕಂಡು ಬಂದ ಕಾರಣ, ಶ್ರೀ ಕೆ. ಸುರೇಶ್, ಹಿಂದಿನ ಪಂಚಾಯತಿ ಅಭಿವೃದ್ದಿ ಅಧಿಕಾರಿ ಇವರಿಗೆ ಕಾರಣ ಕೇಳುವ ನೋಟೀಸ್ ಅನ್ನು ನೀಡಲಾಗಿರುತ್ತದೆ ಎಂದು ಕಂಡು ಬಂದಿರುತ್ತದೆ. ದಿ:25/06/2012 ರಿಂದ 15/09/2015 ರವರೆಗೆ ಶ್ರೀ ಕೆ. ಸುರೇಶ್ ರವರು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡಿಕೊಂಡಿದ್ದು, ಇದೇ ಅವಧಿಯಲ್ಲಿ 2012ನೇ ಡಿಸೆಂಬರ್ ನಿಂದ 2013ನೇ ಜೂನ್ ತನಕ ರೇಷನ್ ಕಾರ್ಡ್ ಸಿಬ್ಬಂದಿಯಾಗಿ ಕೆಲಸ ನಿರ್ವಹಿಸಿಕೊಂಡು ಹೋಗಲು ನೇಮಕ ಮಾಡಿಕೊಂಡಿರುವುದು ಕಂಡು ಬಂದಿರುತ್ತದೆ. ಇವರ ಅವಧಿಯಲ್ಲಿ ರೂ.50/- ರಂತೆ 261 ಪಡಿತರ ಅರ್ಜಿ ರೂ.20/- ರಂತೆ 18 ಅರ್ಜಿಯನ್ನು ಸ್ವೀಕರಿಸಿದ್ದು, ಕೇವಲ ರೂ.1,380/- ಕ್ಕೆ ಚಲನ್ ಕಟ್ಟಿದ್ದು ಕಂಡು ಬಂದಿರುತ್ತದೆ. 2013-14ನೇ ಸಾಲಿನಲ್ಲಿ ರೂ.50/- ರಂತೆ ಸ್ವೀಕರಿಸಿ 1005 ಅರ್ಜಿಗಳನ್ನು ವಿತರಣೆ ಮಾಡಲಾಗಿದ್ದು ಹಾಗೂ ರೂ.20/- ರಂತೆ 356 ಅರ್ಜಿಗಳನ್ನು ಪಡೆಯಲಾಗಿದ್ದು, ಸರ್ಕಾರಕ್ಕೆ ಚಲನ್ ಮೂಲಕ ರೂ.6780/- ಅನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ.

8. 2014-15ನೇ ಸಾಲಿನಲ್ಲಿ ನವೀಕರಣದ ಬಗ್ಗೆ ರೂ.50/- ರಂತೆ 1087 ಅರ್ಜಿಗಳನ್ನು ಸ್ವೀಕರಿಸಿದ್ದು ಹಾಗೂ ಹೊಸ ಪಡಿತರ ಚೀಟಿಗೆ ತಲಾ ರೂ.50/- ರಂತೆ 621 ಅರ್ಜಿಗಳನ್ನು ಸ್ವೀಕರಿಸಿದ್ದು, ರೂ.5100/- ಅನ್ನು ಸರ್ಕಾರಕ್ಕೆ ಚಲನ್ ಮೂಲಕ ಪಾವತಿಸಿರುವುದು ಕಂಡು ಬಂದಿರುತ್ತದೆ. ಪಂಚಾಯತಿ ಅಭಿವೃದ್ದಿ ಅಧಿಕಾರಿಯವರಾದ ಶ್ರೀ ಸುರೇಶ್ ಕೆ ರವರು ಪಡಿತರ ಚೀಟಿಯಿಂದ ಬಂದಿದ್ದ ಹಣವನ್ನು ಆಯಾ ತಿಂಗಳ ಕೊನೆಯಲ್ಲಿ ಅಥವಾ ವರ್ಷದ ಅಂತ್ಯಕ್ಕೆ ನಿಯಮಾನುಸಾರ ಸಂಪೂರ್ಣವಾಗಿ ಚಲನ್ ಮೂಲಕ ಪಾವತಿಸದೇ ಅಲ್ಪ ಪ್ರಮಾಣದ ಹಣವನ್ನು ಸರ್ಕಾರಕ್ಕೆ ಪಾವತಿಸಿರುವುದು ಹಾಗೂ ಉಳಿದ ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡದೇ ತಮ್ಮ ಬಳಿಯೇ ಇಟ್ಟುಕೊಂಡಿರುವುದು ಕಂಡುಬಂದಿರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

9. 27ನೇ ಚಾಂತಾರು ಗ್ರಾಮ ಪಂಚಾಯತಿಯಲ್ಲಿ ಪಡಿತರ ಚೀಟಿ ಪ್ರಕ್ರಿಯೆ ಪ್ರಾರಂಭವಾದಾಗಿನಿಂದ ದಿ:16/06/2016 ರವರೆಗೆ ಪಡಿತರ ಚೀಟಿಗೆ ಸಂಬಂಧಿಸಿದಂತೆ ಫಲಾನುಭವಿಗಳಿಂದ ವಸೂಲಾತಿ

ಮಾಡಿದ ಹಣವನ್ನು ಇತರೆ ಖರ್ಚು ವೆಚ್ಚಕ್ಕೆ ಬಳಸಿಕೊಂಡಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ, ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ದೂರುದಾರರು ದೂರು ನೀಡಿದ ನಂತರ ಬ್ರಹ್ಮಾವರ ವಿಜಯ ಬ್ಯಾಂಕ್ ಶಾಖೆಯಲ್ಲಿ ಹಣ ಜಮಾ ಮಾಡಿಕೊಂಡಿರುವುದು ಕಂಡು ಬರುತ್ತದೆ ಎಂದು ತಿಳಿಸಿರುತ್ತಾರೆ. (ಸದರಿ ತನಿಖಾ ವರದಿಯನ್ನು ಹಾಜರುಪಡಿಸಲಾಗಿದೆ).

10. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **2010 ರಿಂದ 2016–17ನೇ ಸಾಲಿನ ವರೆಗಿನ 27ನೇ ಚಾಂತಾರು ಗ್ರಾಮ ಪಂಚಾಯತಿ, ಬ್ರಹ್ಮಾವರ, ಉಡುಪಿ ತಾಲ್ಲೂಕಿನ ಲೆಕ್ಕಪರಿಶೋಧನೆಯನ್ನು ನಡೆಸಿ ದುರುಪಯೋಗಪಡಿಸಿಕೊಳ್ಳಲಾದ ಹಣದ ಮೊತ್ತವನ್ನು ದೃಢಪಡಿಸಿಕೊಂಡು 1ನೇ ಎದುರುದಾರರಿಂದ ಸದರಿ ಮೊತ್ತವನ್ನು ವಸೂಲು ಮಾಡಲು ಕ್ರಮ ಜರುಗಿಸಲು ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 15/5/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 15/5/17